ಗ್ರಂಥಾಲಯ ಸೆಸ್

105(1666); ಶ್ರೀ ವಿಜಯಕುಮಾರ್ ಬಿ.ಎನ್.

ಅ) ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳು ಗ್ರಂಥಾಲಯ ಸೆಸ್ ವಸೂಲು ಮಾಡುತ್ತಿರುವುದು ನಿಜವೇ; ಹಾಗಿದ್ದಲ್ಲಿ, ವಸೂಲಿ ಮಾಡುತ್ತಿರುವ ಗ್ರಂಥಾಲಯ ಸೆಸ್ ಎಷ್ಟು;

ಆ) ಹಾಗಿದ್ದಲ್ಲಿ ಕಳೆದ ಮೂರು ವರ್ಷಗಳಿಂದ ವಸೂಲಿ ಮಾಡಿರುವ ಗ್ರಂಥಾಲಯ ಸೆಸ್ ಎಷ್ಟು; (ಜಿಲ್ಲಾವಾರು ವಿವರ ನೀಡುವುದು);

ಇ) ಈ ರೀತಿ ವಸೂಲಿ ಮಾಡಿರುವ ಗ್ರಂಥಾಲಯ ಸೆಸ್ ಅನ್ನು ಗ್ರಂಥಾಲಯ ಪ್ರಾಧಿಕಾರಕ್ಕೆ ಹಸ್ತಾಂತರಿಸಲಾಗಿದೆಯೇ; ಹಾಗಿಲ್ಲದಿದ್ದಲ್ಲಿ ಇದಕ್ಕೆ ಕಾರಣವೇನು;

ಈ) ಗ್ರಂಥಾಲಯ ಸೆಸ್ ಬಾಕಿ ಉಳಿಸಿಕೊಂಡಿರುವ ನಗರ ಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯತಿಗಳಾವುವು; ಇವರಿಂದ ಬರಬೇಕಿರುವ ಗ್ರಂಥಾಲಯ ಸೆಸ್ ಮೊತ್ತವೆಷ್ಟು;

ಉ) ಗ್ರಂಥಾಲಯ ಕರ ಬಾಕಿ ಉಳಿಸಿಕೊಂಡಿರುವುದರಿಂದ ಗ್ರಂಥಾಲಯಗಳ ಅಭಿವೃದ್ಧಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕರ ವಸೂಲಿಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಕಿಮ್ಮನೆ ರತ್ನಾಕರ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಹೌದು

ಸಂಗ್ರಹವಾಗುವ ಆಸ್ತಿ ತೆರಿಗೆಯ ಮೇಲೆ ಶೇ.6 ರಷ್ಟು ಗ್ರಂಥಾಲಯ ಕರ ವಸೂಲಿ ಮಾಡಲಾಗುತ್ತಿದೆ.

ಆ) ಕಳೆದ ಮೂರು ವರ್ಷಗಳಿಂದ ವಸೂಲಿ ಮಾಡಿರುವ ಗ್ರಂಥಾಲಯ ಸೆಸ್ ಅಂದಾಜು ರೂ. 25867.21 ಲಕ್ಷಗಳು.

ಜಿಲ್ಲಾವಾರು ವಿವರವನ್ನು ಅನುಬಂಧ – 1ರಲ್ಲಿ ನೀಡಲಾಗಿದೆ.

ಇ) ರಾಜ್ಯದ ಸ್ಥಳೀಯ ಸಂಸ್ಥೆಗಳು ಸಾರ್ವಜನಿಕರಿಂದ ವಸೂಲಿ ಮಾಡಲಾದ ಗ್ರಂಥಾಲಯ ಕರದಲ್ಲಿ ಅಂದಾಜು ರೂ.11966.45 ಲಕ್ಷಗಳ ಮೊತ್ತವನ್ನು ಮಾತ್ರ ಗ್ರಂಥಾಲಯ ಪ್ರಾಧಿಕಾರಕ್ಕೆ ಹಸ್ತಾಂತರಿಸಲಾಗಿದೆ. ನಿಯಮಿತವಾಗಿ ವಸೂಲಿ ಮಾಡಿದ ಗ್ರಂಥಾಲಯ ಕರದ ಪೂರ್ಣ ಹಣ ಪಾವತಿಸುತ್ತಿಲ್ಲ. ಅನೇಕ ಬಾರಿ ಸಂಬಂಧಿಸಿದ ಸಂಸ್ಥೆಗಳಿಗೆ ಬಾಕಿ ಇರುವ ಗ್ರಂಥಾಲಯ ಕರ ಪಾವತಿಸುವಂತೆ ಪತ್ರ ವ್ಯವಹಾರ ನಡೆಸಲಾಗಿರುತ್ತದೆ.

ಈ) ನಗರ ಪಾಲಿಕೆ, ನಗರ ಸಭೆ, ಪುರಸಭೆ, ಪಟ್ಟಣ ಪಂಚಾಯತಿಗಳಿಂದ ಬಾಕಿ ಉಳಿಸಿಕೊಂಡಿರುವ ಗ್ರಂಥಾಲಯ ಸೆಸ್ ಅಂದಾಜು ರೂ. 25,883.76 ಲಕ್ಷಗಳ ವಿವರವನ್ನು ಅನುಬಂಧ–2 ರಲ್ಲಿ ನೀಡಲಾಗಿದೆ.

ಉ) ಹೌದು.

ಮಹಾನಗರಪಾಲಿಕೆಗಳು ಹಾಗೂ ರಾಜ್ಯದ ಸ್ಥಳೀಯ ಸಂಸ್ಥೆಗಳಿಂದ ವಸೂಲಿ ಮಾಡಲಾದ ಗ್ರಂಥಾಲಯ ಕರವನ್ನು ನಿಯಮಿತವಾಗಿ ಇಲಾಖೆಗೆ ಪಾವತಿಸದೇ ಇರುವ ಕಾರಣ, ಸಂಗ್ರಹಿಸಲಾದ ಗ್ರಂಥಾಲಯ ಕರವನ್ನು ನಾನ್ ಆಪರೇಟಿಂಗ್ ಅಕೌಂಟ್ ಅಥವಾ ಎಲೆಕ್ಟ್ರಾನಿಕ್ ಕ್ಲಿಯರಿಂಗ್ ಸಿಸ್ಟಮ್ (ಇ.ಸಿ.ಎಸ್.) ಮೂಲಕ ಗ್ರಂಥಾಲಯ ಇಲಾಖೆಗೆ ಪಾವತಿಸುವ ಬಗ್ಗೆ ದಿನಾಂಕ: 05.01.2011 ರಂದು ಮಾನ್ಯ ನಗರಾಭಿವೃದ್ಧಿ ಹಾಗೂ ಮಾನ್ಯ ಗ್ರಂಥಾಲಯ ಸಚಿವರುಗಳ ನೇತೃತ್ವದಲ್ಲಿ ಸಭೆ ನಡೆಸಲಾಗಿತ್ತು.

ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು ಇವರ ಪತ್ರ ಸಂ.ಸಾಗ್ರಂಇ/ನಿಕ/ಲೆಪವಿ–1/10/ಗ್ರಂ.ಕರ/ 5231/14–15 ದಿನಾಂಕ:06.11.2014, 06.12.2014 ಮತ್ತು ದಿನಾಂಕ:07.01.2015 ರಲ್ಲಿ ಇ.ಸಿ.ಎಸ್(ECS) ಮುಖಾಂತರ ಗ್ರಂಥಾಲಯ ಕರ ಇಲಾಖೆಗೆ ನೇರವಾಗಿ ಪಾವತಿಸುವಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,

ನಗರಾಭಿವೃದ್ಧಿ ಮತ್ತು ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರಿಗೆ ಪತ್ರ ವ್ಯವಹರಿಸಲಾಗಿದೆ.

ಮಾನ್ಯ ಶಿಕ್ಷಣ ಸಚಿವರ ಟಿಪ್ಪಣಿ ಸಂ. ಪ್ರಾ&ಪ್ರೌಸ:31/2015 ದಿನಾಂಕ: 01.01.2015 ರ ಮುಖಾಂತರ ಬಾಕಿಯಿರುವ ಗ್ರಂಥಾಲಯ ಕರ ಪಾವತಿಸುವಂತೆ ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ, ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಹಾಗೂ ಒಂಭತ್ತು ಮಹಾನಗರ ಪಾಲಿಕೆಗಳ ಆಯುಕ್ತರಿಗೂ ಸಹ ಪತ್ರ ವ್ಯವಹರಿಸಲಾಗಿರುತ್ತದೆ. ಅದರೂ ಸಹ ಮಹಾನಗರ ಪಾಲಿಕೆಗಳ ಹಾಗೂ ರಾಜ್ಯದ ಸ್ಥಳೀಯ ಸಂಸ್ಥೆಗಳ ಬಾಕಿಯಿರುವ ಗ್ರಂಥಾಲಯ ಕರ ನಿಯಮಾನುಸಾರ ಇಲಾಖೆಗೆ ಪಾವತಿಸುತ್ತಿಲ್ಲ. ಈ ಕುರಿತಂತೆ ನಗರಾಭಿವೃದ್ಧಿ ಮತ್ತು ಸಂಬಂಧಪಟ್ಟ ಇತರೆ ಇಲಾಖೆಗಳೊಂದಿಗೆ ಸಮಾಲೋಚನೆ ನಡೆಸಲು ಕ್ರಮ ಕೈಗೊಳ್ಳಲಾಗುವುದು.

ಅನುಬಂಧ – I

ಮೂರು ವರ್ಷಗಳಿಂದ ಸ್ಥಳೀಯ ಸಂಸ್ಥೆಗಳು ಸಂಗ್ರಹಿಸಿರುವ ಅಂದಾಜು ಗ್ರಂಥಾಲಯ ಕರದ ವಿವರ(2013–14ರ ಅಂತ್ಯಕ್ಕೆ)

ಕ್ರ.ಸಂ.	ಜಿಲ್ಲೆಗಳ ಹೆಸರು	ಸ್ಥಳೀಯ ಸಂಸ್ಥೆಗಳು ಸಂಗ್ರಹಿಸಲಾವ ಗ್ರಂಥಾಲಯ ಕರದ ಮೊತ್ತ (ಲಕ್ಷಗಳಲ್ಲಿ)
1.	ಬೆಂಗಳೂರು (ನ) (ಬಿ.ಬಿ.ಎಂ.ಪಿ 5 ವಲಯಗಳು ಸೇರಿ)	21885.72
2.	ಬೆಂಗಳೂರು (ಗ್ರಾ)	62.54
3.	ಕೋಲಾರ	100.71
4.	ತುಮಕೂರು	204.25
5.	ಚಿತ್ರದುರ್ಗ	37.62
6.	ಶಿವಮೊಗ್ಗ	151.94
7.	ದಾವಣಗೆರೆ	147.05
8.	ಮೈಸೂರು	881.95
9.	ಮಂಡ್ಯ	92.49
10.	ಹಾಸನ	137.50
11.	ಚಿಕ್ಕಮಗಳೂರು	80.00
12.	ಮಡಿಕೇರಿ	26.80
13.	ದಂಗಳೂರು (ದ.ಕ)	144.67
14.	ಉಡುಪಿ	34.61
15.	ಚಾಮರಾಜನಗರ	27.39
16.	ಬೆಳಗಾಂ	166.91
17.	ಧಾರವಾಡ	448.56
18.	ಕಾರವಾರ	37.10
19.	ಬಿಜಾಪುರ	93.62
20.	ಹಾವೇರಿ	81.59
21.	ಗದಗ	58.10
22.	ಬಾಗಲಕೋಟೆ	135.61
23.	ಗುಲ್ಬರ್ಗಾ	62.91
24.	ಬಳ್ಳಾರಿ	236.53
25.	ಬೀದರ್	42.50
26.	ರಾಯಚೂರು	86.60
27.	ಕೊಪ್ಪಳ	45.89
28.	ರಾಮನಗರ	83.66
29.	ಚಿಕ್ಕಬಳ್ಳಾಪುರ	83.25
30.	ಯಾದಗಿರಿ	188.94
		25867.21

ಅನುಬಂಧ –2

ಮಹಾನಗರ ಪಾಲಿಕೆಗಳಿಂದ ಬಾಕಿ ಉಳಿಸಿಕೊಂಡಿರುವ ಗ್ರಂಥಾಲಯ ಕರದ ವಿವರ (2013–14 ರ ಅಂತ್ಯಕ್ಕೆ)

ಕ್ರ.ಸಂ. (ಅ)	ಮಹಾನಗರ ಪಾಲಿಕೆ ಹೆಸರು	ಬಾಕಿ ಇರುವ ಗ್ರಂಥಾಲಯ ಕರದ ಮೊತ್ತ (ಲಕ್ಷಗಳಲ್ಲಿ)
1.	ಬಿಬಿಎಂಪಿ, ಬೆಂಗಳೂರು	22,348.00
2.	ಬಳ್ಳಾರಿ	160.66
3.	ಮಂಗಳೂರು	22.59
4.	ಮೈಸೂರು	1100.00
5.	ಧಾರವಾಡ	361.49
6.	ಬೆಳಗಾವಿ	4.46
7.	ವಿಜಯಪುರ	69.66
8.	ದಾವಣಗೆರೆ	48.72
9.	ಕಲಬುರಗಿ	4.52
	ಒಟ್ಟು ಮೊತ್ತ	24,120.1
ಕ್ರ.ಸಂ. (ಆ)	ನಗರ ಸಭೆಗಳ ಹೆಸರು	ಬಾಕಿ ಇರುವ ಗ್ರಂಥಾಲಯ ಕರದ ಮೊತ್ತ (ಲಕ್ಷಗಳಲ್ಲಿ)
1.	ಹೊಸಪೇಟೆ	17.48
2.	ಚಿಕ್ಕಮಗಳೂರು	31.21
3.	ಚಿತ್ರದುರ್ಗ	10.95
4.	ರಾಮನಗರ	52.91
5.	ಉಡುಪಿ	2.92
6.	ಕಾರವಾರ	0.69
7.	ದಾಂಡೇಲಿ	33.00
8.	ಹಾವೇರಿ	23.35
9.	ರಾಣೇಬೆನ್ನೂರು	25.10
10.	ಹರಿಹರ	16.28
11.	ಚಾಮರಾಜನಗರ	5.12
12.	ಶಿವಮೊಗ್ಗ	102.36
13.	ಭದ್ರಾವತಿ	18.44
14.	ಸಾಗರ	2.66
15.	ದೊಡ್ಡಬಳ್ಳಾಪುರ	25.89
16.	ಯಾದಗಿರಿ	179.52
17.	ತುಮಕೂರು	81.77
18.	ತಿಪಟೂರು	1.15
19.	ಶಿರಾ	7.90
20.	ಗದಗ	10.55

21.	ಕೊಪ್ಪಳ	1.65
22.	ಗಂಗಾವತಿ	28.66
23.	ಶಹಬಾದ್	3.28
24.	ಮಂಡ್ಯ	47.13
25.	ಹಾಸನ	44.31
26.	ಗೋಕಾಕ್	7.90
27.	ನಿಪಾಣಿ	33.29
28.	ಬಾಗಲಕೋಟೆ	1.22
29.	ಬನ್ನಟ್ಟಿ	22.98
30.	ಜಮಖಂಡಿ	24.99
31.	ಇಳಕಲ್	1.73
32.	ಮಡಿಕೇರಿ	20.68
33.	ಚಿಕ್ಕಬಳ್ಳಾಪುರ	22.40
34.	ಚಂತಾಮಣಿ	34.46
35.	ಬೀದರ್	8.03
36.	ಬಸವಕಲ್ಯಾಣ	1.90
37.	ರಾಯಚೂರು	18.05
38.	ಸಿಂಧನೂರು	22.76
39.	ಕೋಲಾರ	22.45
40.	ಕೆ.ಜಿ.ಎಫ್.	11.71
	ಒಟ್ಟು ಮೊತ್ತ	**1028.83**

ಕ್ರ.ಸಂ. (ಇ)	ಪುರಸಭೆಗಳ ಹೆಸರು	ಬಾಕಿ ಇರುವ ಗ್ರಂಥಾಲಯ ಕರದ ಮೊತ್ತ (ಲಕ್ಷಗಳಲ್ಲಿ)
1.	ಹೂವಿನ ಹಡಗಲಿ	1.14
2.	ಸಿಂಧನೂರು	2.79
3.	ಸಿರಗುಪ್ಪ	1.40
4.	ಕಡೂರು	21.71
5.	ಬಿರೂರು	2.76
6.	ಚಳ್ಳಕೆರೆ	9.31
7.	ಹಿರಿಯೂರು	1.21
8.	ಹೊಸದುರ್ಗ	7.95
9.	ಬಂಟ್ವಾಳ	1.27
10.	ಪುತ್ತೂರು	3.35
11.	ಮೂಡುಬಿದರೆ	11.76
12.	ಕನಕಪುರ	9.98
13.	ಮಾಗಡಿ	7.79
14.	ಕಾರ್ಕಳ	1.87
15.	ಕುಂದಾಪುರ	1.54
16.	ಭಟ್ಕಳ	5.77
17.	ಕುಮಟಾ	3.62
18.	ಬ್ಯಾಡಗಿ	1.73

19.	ಹಾನಗಲ್	5.46
20.	ಸವಣೂರು	8.96
21.	ಶಿಗ್ಗಾವ್	3.49
22.	ಬಂಕಾಪುರ	1.19
23.	ಹರಪ್ಪನಹಳ್ಳಿ	4.48
24.	ಗುಂಡ್ಲುಪೇಟೆ	9.12
25.	ನಂಜನಗೂಡು	1.48
26.	ಹುಣಸೂರು	13.47
27.	ಕೆ.ಆರ್. ನಗರ	3.47
28.	ಬನ್ನೂರು	2.56
29.	ಶಿಕಾರಿಪುರ	1.70
30.	ದೇವನಹಳ್ಳಿ	7.61
31.	ಹೊಸಕೋಟೆ	7.63
32.	ನೆಲಮಂಗಲ	1.83
33.	ಶಹಾಪೂರ್	2.73
34.	ಸುರಪುರ	3.93
35.	ಚಿಕ್ಕನಾಯಕನಹಳ್ಳಿ	1.30
36.	ಮಧುಗಿರಿ	15.74
37.	ಕುಣಿಗಲ್	49.21
38.	ಪಾವಗಡ	1.38
39.	ಗಜೇಂದ್ರಘಡ	10.81
40.	ಲಕ್ಷ್ಮೇಶ	1.73
41.	ಮುಂಡರಗಿ	3.75
42.	ನರಗುಂದ	1.79
43.	ರೋಣ	5.08
44.	ಕುಷ್ಟಗಿ	7.28
45.	ಸೇಡಂ	8.03
46.	ಅಳಂದ	5.65
47.	ವಾಡಿ	3.60
48.	ಚಿತ್ತಾಪುರ	3.06
49.	ಅಣ್ಣಿಗೇರಿ	1.57
50.	ನವಿಲುಗುಂದ	1.18
51.	ಮದ್ದೂರು	5.76
52.	ಮಳವಳ್ಳಿ	9.02
53.	ಶ್ರೀರಂಗಪಟ್ಟಣ	3.89
54.	ಕೆ.ಆರ್.ಪೇಟೆ	5.77
55.	ಅರಸೀಕೆರೆ	10.18
56.	ಚನ್ನರಾಯಪಟ್ಟಣ	18.33
57.	ಹೊಳೆನರಸೀಪುರ	4.12
58.	ಸಕಲೇಶಪುರ	8.69
59.	ಬೇಲೂರು	13.97

60.	ಅಥಣಿ	3.37
61.	ಬೈಲಹೊಂಗಲ	6.82
62.	ಚಿಕ್ಕೋಡಿ	9.57
63.	ಮೂಡಲಗಿ	5.12
64.	ರಾಮದುರ್ಗ	10.88
65.	ಸಂಕೇಶ್ವರ	4.55
66.	ಸವದತ್ತಿ	4.11
67.	ಮುಧೋಳ	13.31
68.	ಮಹಾಲಿಂಗಪುರ	14.05
69.	ಗುಳೇಗುಡ್ಡ	1.56
70.	ಬಾದಾಮಿ	7.52
71.	ತೇರದಾಳ	2.50
72.	ಆನೇಕಲ್	17.76
73.	ಶಿಡ್ಲಘಟ್ಟ	6.49
74.	ಗೌರಿಬಿದನೂರು	8.01
75.	ಬಾಗೇಪಲ್ಲಿ	1.99
76.	ಭಾಲ್ಕಿ	7.21
77.	ಹುಮನಾಬಾದ್	9.67
78.	ಚಿಟಗುಪ್ಪ	1.67
79.	ತಾಳೀಕೋಟೆ	2.10
80.	ಬಸವನ ಬಾಗೇವಾಡಿ	1.14
81.	ಇಂಡಿ	1.47
82.	ಮುದ್ದೇಬಿಹಾಳ	4.72
83.	ಸಿಂಧಗಿ	1.16
84.	ಮಾನ್ವಿ	8.12
85.	ಲಿಂಗಸುಗೂರು	5.40
86.	ದೇವದುರ್ಗ	1.84
87.	ಬಂಗಾರುಪೇಟೆ	15.48
88.	ಮಾಲೂರು	13.69
89.	ಮುಳಬಾಗಿಲು	8.39
90.	ಶ್ರೀನಿವಾಸಪುರ	.1.95
	ಒಟ್ಟು ಮೊತ್ತ	578.57

ಕ್ರ.ಸಂ. (ಈ)	ಪಟ್ಟಣ ಪಂಚಾಯತಿ ಹೆಸರು	ಬಾಕಿ ಇರುವ ಗ್ರಂಥಾಲಯ ಕರದ ಮೊತ್ತ (ಲಕ್ಷಗಳಲ್ಲಿ)
1.	ಕಂಪ್ಲಿ	5.04
2.	ಕಮಲಾಪುರ	4.6
3.	ಕೂಡ್ಲಗಿ	4.01
4.	ಕೊಟ್ಟೂರು	1.36
5.	ತೆಕಲಕೋಟೆ	0.34
6.	ಎನ್.ಆರ್.ಪುರ	1.13

7.	ಕೊಪ್ಪ	1.21
8.	ಶೃಂಗೇರಿ	1.09
9.	ಮೂಡಿಗರ	1.53
10.	ಹೊಳಲ್ಕೆರ	0.97
11.	ಮೊಳಕಾಲ್ಮೂರು	5.36
12.	ಚಿಕ್ಕಂಗಡಿ	0.92
13.	ಮುಲ್ಕಿ	0.68
14.	ಸುಳ್ಯ	3.06
15.	ಉಳ್ಳಾಲ	3.86
16.	ಸಾಲಿಗ್ರಾಮ	1.48
17.	ಅಂಕೋಲ	0.98
18.	ಸಿದ್ದಾಪುರ	0.93
19.	ಯಲ್ಲಾಪುರ	0.33
20.	ಮುಂಡಗೋಡ್	0.68
21.	ಹಲ್ಯಾಳ	0.25
22.	ಹಿರೇಕೆರೂರು	0.51
23.	ಹೊನ್ನಳ್ಳಿ	3.79
24.	ಜಗಳೂರು	3.37
25.	ಯಳಂದೂರು	0.55
26.	ಆನೂರು	2.69
27.	ಟಿ. ನರಸೀಪುರ	0.55
28.	ಪಿರಿಯಾಪಟ್ಟಣ	3.09
29.	ಸರಗೂರು	0.85
30.	ಹಚ್.ಡಿ. ಕೋಟೆ	3.27
31.	ತೀರ್ಥಹಳ್ಳಿ	1.74
32.	ಸೊರಬ	0.62
33.	ಶಿರಾಳ್‌ಕೊಪ್ಪ	3.01
34.	ಹೊಸನಗರ	0.41
35.	ಜೋಗ್‌ಕಾರ್ಗಲ್	0.47
36.	ಗುರುಮಿಠಕಲ್	0.26
37.	ತುರುವೇಕರ	0.22
38.	ಕೊರಟಗೆರೆ	2.67
39.	ಮುಳಗುಂದ	0.54
40.	ಶಿರಹಟ್ಟಿ	5.98
41.	ನರೇಗಲ್	1.46
42.	ಯಲಬುರ್ಗ	0.61
43.	ಜೇವರ್ಗಿ	3.49
44.	ಚಿಂಚೋಳಿ	2.25
45.	ಅಫಜಲ್‌ಪುರ	8.36
46.	ಆಳನವರ್	1.39
47.	ಕುಂದಗೋಳ	1.71

48.	ತಲಗಟ್ಟಿ	0.13
49.	ಪಾಂಡವಪುರ	3.37
50.	ಅರಕಲಗೂಡು	1.44
51.	ಆಲೂರು	0.46
52.	ಗೋಕಾಕ್	1.70
53.	ಹುಕ್ಕೇರಿ	1.52
54.	ಖಾನಾಪುರ	6.57
55.	ಕೊಣ್ಣೂರು	0.10
56.	ಕುಡಚಿ	3.49
57.	ರಾಯಭಾಗ	8.15
58.	ಸಡಲಗ	4.40
59.	ಹುನಗುಂದ	8.63
60.	ಕೆರೂರು	1.38
61.	ಬೀಳಗಿ	5.37
62.	ಕುಶಾಲನಗರ	2.01
63.	ಸೋಮವಾರಪೇಟೆ	4.11
64.	ವಿರಾಜಪೇಟೆ	5.60
65.	ಗುಡಿಬಂಡೆ	1.12
66.	ಔರಾದ್(ಬಿ)	1.24
67.	ಮುದಗಲ್	1.80
	ಒಟ್ಟು ಮೊತ್ತ	156.26

'ಅ' ಯಿಂದ 'ಈ' ವರೆಗೆ ಸಂಕ್ಷಿಪ್ತ ಅಂಕಿ ಅಂಶಗಳು

ಕ್ರ.ಸಂ		ರೂ. ಲಕ್ಷಗಳಲ್ಲಿ
1.	9 ಮಹಾನಗರ ಪಾಲಿಕೆಗಳು	24120.10
2.	ನಗರ ಸಭೆಗಳಿಂದ	1028.83
3.	ಪುರ ಸಭೆಗಳಿಂದ	578.57
4.	ಪಟ್ಟಣ ಪಂಚಾಯಿತಿಗಳಿಂದ	156.26
	ಒಟ್ಟು	25883.76

ಶ್ರೀ ಬಿ.ಎನ್. ವಿಜಯಕುಮಾರ್: ಉತ್ತರ ಕೊಟ್ಟಿದ್ದಾರೆ. ಇದರಲ್ಲಿ ಸಾಧಾರಣ 5 ವರ್ಷಗಳಲ್ಲಿ 158 ಕೋಟಿ ರೂಪಾಯಿಗಳ cess ಬಾಕಿ ಇದೆ ಎಂದು ಬರೆದಿದ್ದಾರೆ. ಹಣ ಸಂಗ್ರಹವಾಗಿ, ಪೌರಾಡಳಿತದಲ್ಲಿ, ನಗರಾಭಿವೃದ್ಧಿ ಇಲಾಖೆಯಲ್ಲಿ, ಮಹಾನಗರಪಾಲಿಕೆಯಲ್ಲಿ ಎಲ್ಲ ಉಳಿದುಕೊಂಡುಬಿಟ್ಟಿದೆ. ಏನಾಗುತ್ತಿದೆ ಎಂದರೆ, ಅಲ್ಲಿ ಈ ಹಣ ಬರದೇ paper ಕೊಂಡುಕೊಳ್ಳುವುದಕ್ಕೆ ಅವರಿಗೆ ಹಣವಿಲ್ಲ. Magazine ಕೊಂಡುಕೊಳ್ಳುವುದಕ್ಕೆ ಹಣವಿಲ್ಲ. ಅಲ್ಲಿರುವಂಥ contract labourer ಗೆ ಸಂಬಳ ಕೊಡುವುದಕ್ಕೆ ಹಣವಿಲ್ಲ. ಏನು ಕೇಳಿದರೂ ಹಣವಿಲ್ಲ. ಇಡೀ ರಾಜ್ಯದಲ್ಲಿ ಮಕ್ಕಳಿಗೆ ಶಿಕ್ಷಣ ಕೊಡುವುದಕ್ಕೆ library ತೆರೆಯಬೇಕೆಂದು ಊರೆಲ್ಲ ತೆರೆಯುತ್ತೇವೆ. ಅಲ್ಲಿ ನಡೆಸುವುದಕ್ಕೆ ಇವರಿಗೆ ಶಕ್ತಿ ಇಲ್ಲ, ಹಣವೂ ಇಲ್ಲ, ನಡೆಸುತ್ತಾ ಇಲ್ಲ. ನನಗೆ ಅನಿಸುತ್ತದೆ, 3–3, 4–4 ತಿಂಗಳಿನಿಂದ ಸಂಬಳ ಕೊಟ್ಟಿಲ್ಲ. ಬೆಂಗಳೂರಿನ ಒಂದು zone ನಲ್ಲಿ ಒಬ್ಬ paper vendor ಗೆ 68 ಲಕ್ಷ ರೂಪಾಯಿ ಕೊಡಬೇಕು. ಅವನು paper ಹೇಗೆ ಹಾಕುತ್ತಾನೆ? Newspaper, magazine ಹೇಗೆ ಹಾಕುತ್ತಾನೆ? ಇವರಿಗೆ ಹಣ ವಸೂಲಿ ಮಾಡುವುದಕ್ಕಾಗುತ್ತದೆಯೇ? ನಗರಾಭಿವೃದ್ಧಿ ಮತ್ತು ಪೌರಾಡಳಿತ ಇಲಾಖೆಗಳಿಂದ ಸಾಧಾರಣ 48 ಲಕ್ಷ ರೂಪಾಯಿ ಕೊಡಬೇಕು. ಅವರು ಯಾವಾಗ ಕೊಡುತ್ತಾರೆ? ಮಹಾನಗರಪಾಲಿಕೆಯಿಂದ ಸಾಧಾರಣ 223 ಕೋಟಿ ರೂಪಾಯಿ ಇದೆ. ಸನ್ಮಾನ್ಯ ಮುಖ್ಯಮಂತ್ರಿಯವರು ಇಲ್ಲೇ ಇದ್ದಾರೆ. ಅವರು ಯಾವಾಗ ಕೊಡಿಸುತ್ತಾರೆ? ಇಲ್ಲವೆಂದರೆ, ಇಲ್ಲಿ ಒಂದು ತರಹ ಅಸಹಾಯಕ ರೀತಿಯಲ್ಲಿ ಉತ್ತರ ಇದೆ. 4ನೇ ಪ್ರಶ್ನೆಯಲ್ಲಿ, 3–3, 4–4 ಸಾರಿ meeting ಮಾಡಿದ್ದಾರೆ. 2011 ರಿಂದ 3–3 ಜನ ಮಂತ್ರಿಗಳು meeting ಮಾಡಿದ್ದಾರೆ. ಪತ್ರ ವ್ಯವಹಾರ ಮಾಡಿದ್ದಾರೆ. ಎಲ್ಲಾ ಮಾಡಿ ಯಾರೂ ಕೊಡುತ್ತಿಲ್ಲ. ಜಿಲ್ಲಾಧಿಕಾರಿಗಳಿಗೆ, ಮುಖ್ಯ ನಿರ್ವಹಣಾಧಿಕಾರಿಗಳಿಗೆ ಎಲ್ಲರಿಗೂ ಬರೆದಿದ್ದಾರೆ. ಯಾರೂ ಕೊಡುತ್ತಿಲ್ಲವೆಂದು ಅಸಹಾಯಕತೆ ಇದೆ. ನಾನು ಮಂತ್ರಿಗಳಲ್ಲಿ ಕೇಳುತ್ತೇನೆ, ಅವರ ಅಸಹಾಯಕತೆ ನಿಜವೇ? ಅವರಿಗೆ ವಸೂಲಿ ಮಾಡುವುದಕ್ಕಾಗುತ್ತದೆಯೇ, ಇಲ್ಲವೇ? ಪೌರಡಳಿತ ಮಂತ್ರಿಯವರು ಇಲ್ಲಿಯೇ

ಇದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಇಲ್ಲಿಯೇ ಇದ್ದಾರೆ. ದಯವಿಟ್ಟು ಅವರು ಬೇಗ ಆ ಹಣವನ್ನು ಕೊಡಿಸಲಿ ಎಂಬುದು ನನ್ನ ವಿನಂತಿ.

ಶ್ರೀ ಕಿಮ್ಮನೆ ರತ್ನಾಕರ್: ವಾಸ್ತವದಲ್ಲಿ Library cess ಏನಾಗುತ್ತದೆಂದರೆ, ಜಿಲ್ಲಾಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್, ಗ್ರಾಮ ಪಂಚಾಯಿತಿಗಳ ಮೂಲಕ ಮತ್ತು Coporation ನಲ್ಲಿ ಅವರವರ ವ್ಯಾಪ್ತಿಯಲ್ಲಿ ಅದೇ ಅಧಿಕಾರಿಗಳು ಹಣವನ್ನು ಸಂಗ್ರಹಣೆ ಮಾಡುತ್ತಾರೆ. BBMP ಯಿಂದ ಸುಮಾರು 200 ಕೋಟಿ ರೂಪಾಯಿ ನಮಗೆ ಬರಬೇಕಾದಂಥ ಅಗತ್ಯವಿದೆ. BBMP ಯಿಂದ ಹಣ ಬಾಕಿ ಇದೆ. ಅವರು ಹೇಳುವುದರಲ್ಲಿ ಸತ್ಯ ಇದೆ. Library ಯದ್ದು ಸುಮಾರು 258 ಕೋಟಿ ರೂಪಾಯಿ ನಮಗೆ ಬರಬೇಕಾದಂಥ ಹಣ ಇದೆ. ಅವರಿಂದ payment ಬರುತ್ತಿಲ್ಲ. ಅವರ Head of account ಗೆ ಜಮಾ ಆಗುತ್ತದೆ. Cess collect ಮಾಡುವುದು ನಮ್ಮ ಪರವಾಗಿ ಆದರೂ ಕೂಡ ಹಣ ಜಮಾ ಆಗತಕ್ಕಂಥದ್ದು BBMP ಗೆ ಮತ್ತು ಜಿಲ್ಲಾಪಂಚಾಯತ್‌ಗಳಿಗೆ. ಆದರೂ ಅವರು ನಮಗೆ ವಾಪಸ್ ಕೊಡುವುದರಲ್ಲಿ ಪ್ರಯತ್ನ ಮಾಡುತ್ತಿಲ್ಲ. ಈಗಾಗಲೇ request ಮಾಡಿಕೊಂಡಿದ್ದೇವೆ. ಈ ತಿಂಗಳ ಅಂತ್ಯದಲ್ಲಿ ಒಂದಷ್ಟು ಹಣ ಕೊಡುತ್ತೇವೆ ಎನ್ನುವ ಮಾತನ್ನು BBMP ಯವರು ಹೇಳಿದ್ದಾರೆ. ಅದೇರೀತಿ ನಾನು ಉಳಿದವರಿಗೂ ಕೂಡ ಪತ್ರ ಬರೆದಿದ್ದೇನೆ.

ಶ್ರೀ ಬಿ.ಎನ್. ವಿಜಯಕುಮಾರ್: ನಮ್ಮ ಪೌರಾಡಳಿತ ಮತ್ತು ನಗರಾಭಿವೃದ್ಧಿ ಸಚಿವರು ಇಲ್ಲೇ ಇದ್ದಾರೆ. 48 ಕೋಟಿ ರೂಪಾಯಿಗಳನ್ನು ಅವರು ಕೊಡಿಸಿಬಿಡಿ ಎಂದು ಇಲ್ಲಿಯೇ ಹೇಳಿಬಿಟ್ಟರೆ ಮುಗಿದೇ ಹೋಯಿತು. Director ರಿಂದ ಸರ್ಕಾರಿ ಅಧಿಕಾರಿಗಳಿಗೆಲ್ಲ ಹಣ ಬರುತ್ತದೆ. Contract labour ನಲ್ಲಿರುವವರಿಗೆ ಪೇಪರ್ ಕೊಂಡುಕೊಳ್ಳುವುದಕ್ಕೆ, ಈಗಂತೂ competitive exam Bangalore ನಲ್ಲಿ ಸಿಕ್ಕಾಪಟ್ಟೆ ಇವೆ, ಹೊಸ ಹೊಸ ಪುಸ್ತಕ ಕೊಂಡುಕೊಳ್ಳುವುದಕ್ಕೆ ಇವರ ಹತ್ತಿರ ಹಣವೇ ಇಲ್ಲ. ಒಂದು toilet repair ಆದರೆ ನಾನು ಅಲ್ಲಿ ಕೇಳಿದರೆ ನಮ್ಮ ಹತ್ತಿರ ಹಣ ಇಲ್ಲವೆನ್ನುತ್ತಾರೆ. ಇವರು library ಯನ್ನು ಹೇಗೆ ನಡೆಸುತ್ತಾರೆ? library ಏಕಿರಬೇಕು? ಇಡೀ

ರಾಜ್ಯದಲ್ಲಿರುವ, ಬೆಂಗಳೂರಿನಲ್ಲಿರುವ library ಯನ್ನು ಮುಚ್ಚಿಬಿಡಿ. ಇಲ್ಲ, ನಡೆಸುವುದಕ್ಕಾಗುತ್ತದೆಯೇ, ಇಲ್ಲವೇ ಹೇಳಿ.

ಉಪಾಧ್ಯಕ್ಷರು: Local bodies ಗೆ ಸ್ವಲ್ಪ ಒತ್ತಡ ಹಾಕಿ, collect ಮಾಡಬೇಕು.

ಶ್ರೀ ಬಿ.ಎನ್. ವಿಜಯಕುಮಾರ್: ಇಲ್ಲಿಯೇ ಇದ್ದಾರಲ್ಲ.

ಉಪಾಧ್ಯಕ್ಷರು: ನೀವು instructions ಕೊಡಿ.

ಶ್ರೀ ವಿನಯಕುಮಾರ್ ಸೊರಕೆ (ನಗರಾಭಿವೃದ್ಧಿ ಸಚಿವರು): ತಾವೂ ಕೂಡ ಸದಸ್ಯರಾಗಿದ್ದೀರಿ.

ಶ್ರೀ ಬಿ.ಎನ್. ವಿಜಯಕುಮಾರ್: ನಾನು ಸದಸ್ಯ ಅಲ್ಲ. ನಾನು ಇಲ್ಲಿ ಸದಸ್ಯ. ನಾನು ಮಹನಾಗರ ಪಾಲಿಕೆ ಸದಸ್ಯ ಅಲ್ಲ. ನಾನು ಇಲ್ಲಿಯ ಸದಸ್ಯ. ನಾನು ನಿಮ್ಮನ್ನು ಕೇಳಿದ್ದು. ನೀವು ನಗರಾಭಿವೃದ್ಧಿ ಮತ್ತು ಪೌರಾಡಳಿತ ಸಚಿವರು. ನಿಮ್ಮಲ್ಲಿರುವ 48 ಕೋಟಿ ರೂಪಾಯಿಗಳನ್ನು ಕೊಡಿಸಿ. ಮುಖ್ಯಮಂತ್ರಿಗಳು ಮಿಕ್ಕಿದ್ದು ಹೇಳುತ್ತಾರೆ, ನಿಮ್ಮದು ಹೇಳಿ.

ಉಪಾಧ್ಯಕ್ಷರು: ಆಯಿತು, ಈಗ ಆ ತರಹ ಹೇಳುವುದಕ್ಕೆ ಬರುವುದಿಲ್ಲ. Local bodies ಗೆ ಸ್ವಲ್ಪ ನೀವು instruction ಕೊಡಿ. ಆ Commissioner ಗೆ ಹೇಳಿ pressure ಮಾಡಿ ಕೊಡಿಸುವ ತರಹ ಮಾಡಿ. Municipalities ಇಲ್ಲಿಂದ ಕೊಡಿಸುವ ರೀತಿ ಮಾಡಿ. ನೀವು ಒಂದು direction ಕೊಡಿ. ಏಕೆಂದರೆ, ಅಲ್ಲಿ ನಡೆಸುವುದು ಕಷ್ಟವಾಗುತ್ತದೆ.

ಶ್ರೀ ವಿನಯ ಕುಮಾರ ಸೊರಕೆ: ಹಣವನ್ನು ಒದಗಿಸುವಂಥ ರೀತಿಯಲ್ಲಿ ನಾನು ಇಲಾಖೆಯ ಮುಖಾಂತರ ತಿಳುವಳಿಕೆ ಕೊಡುತ್ತೇನೆ. BBMP ಗೆ ತಿಳುವಳಿಕೆ ಕೊಡುತ್ತೇನೆ.

ಶ್ರೀ ಬಿ.ಎನ್. ವಿಜಯ ಕುಮಾರ್: ಈಗಿನ ತಂತ್ರಜ್ಞಾನದಲ್ಲಿ ECS ಮೂಲಕ ಕೂಡಲೇ ಪಾವತಿ ಮಾಡಬಹುದಲ್ಲವೆ? 2001 ರಿಂದ ನಿರ್ಣಯ ಮಾಡಿ ಆ ಬಗ್ಗೆ ಹತ್ತು ಹತ್ತು meeting ಮಾಡಿ, ಅದು ಇನ್ನೂ ಜಾರಿಗೆ ಬರಲಿಲ್ಲವೆಂದರೆ ಸರ್ಕಾರದ ನಿಯಮಕ್ಕೆ, ಅಥವಾ ಸರ್ಕಾರದ ಆದೇಶಕ್ಕೆ ಜಿಲ್ಲಾಧಿಕಾರಿಗಳು ಬೇರೆಬೇರೆಯವರು ಮನ್ನಣೆ ಕೊಡುತ್ತಾರೋ ಅಥವಾ ಕೊಡುವುದಿಲ್ಲವೆ? ಕೊಡದಿದ್ದರೆ ಇವರು ಏನು ಕ್ರಮ ತೆಗೆದುಕೊಳ್ಳುತ್ತಾರೆ?

ಉಪಾಧ್ಯಕ್ಷರು: ಅವರಿಗೆ ನೀವು ಸ್ವಲ್ಪ ಹೇಳಿ.

ಶ್ರೀ ಎಲ್.ಎ. ರವಿಸುಬ್ರಹ್ಮಣ್ಯ: Tax source ನಲ್ಲಿ collect ಆದ ತಕ್ಷಣ ಆಯಾ department ಗೆ ಹೋಗುವ ತರಹ ಮಾಡಿದರೆ, ಮಹಾನಗರಪಾಲಿಕೆಯವರು ಹಾಗೂ ಇತರರು ಆ ಹಣವನ್ನು ಉಪಯೋಗಿಸಿಕೊಳ್ಳುವುದು ತಪ್ಪುತ್ತದೆ. ದಯವಿಟ್ಟು direct ಆಗಿ ಎನು tax collect ಮಾಡುತ್ತಾರೆ ಆ amount ಆಯಾ department ಗೆ ಹೋಗುವ ತರಹ ಮಾಡಿಸಿದರೆ ಒಳ್ಳೆಯದು.

ಉಪಾಧ್ಯಕ್ಷರು: ನೋಡಿ ಆ ತರಹ mechanism ಮಾಡಲಿಕ್ಕೆ ಆಗುತ್ತದೆಯೆ ನೋಡಿ.

ಶ್ರೀ ಕಿಮ್ಮನೆ ರತ್ನಾಕರ: ಅದಕ್ಕೆ ನಾವೊಂದು ಹೊಸ ಕಾಯ್ದೆ ಜಾರಿಗೆ ತರಬೇಕೆಂದು ಯೋಚಿಸುತ್ತಿದ್ದೇವೆ.

ಉಪಾಧ್ಯಕ್ಷರು: ಆ ತರಹದ ಒಂದು ಹೊಸ ಆಲೋಚನೆ ಮಾಡಿ.

ಶ್ರೀ ಜಗದೀಶ್ ಶೆಟ್ಟರ್: ಹೊಸ ಕಾಯ್ದೆ ತರುವುದು ಒಂದು ಕಡೆ ಇರಲಿ. ಈಗಿನ ವ್ಯವಸ್ಥೆಗೆ ಏನು ಮಾಡುತ್ತೀರಿ, immediately action ತೆಗೆದುಕೊಳ್ಳಬೇಕಲ್ಲವೆ? ಅಲ್ಲಿ ಗ್ರಂಥಾಲಯ cess ಎಂದು ತೆಗೆದುಕೊಳ್ಳುತ್ತೀರಿ. ಆ ಹಣ ಅಲ್ಲಿಗೆ ಹೋಗಿ ಜಮಾ ಆಗಬೇಕಲ್ಲವೆ? ಅದಕ್ಕೇನಾದರೂ ಒಂದು ಕ್ರಮ ತೆಗೆದುಕೊಳ್ಳಿ. ನೀವು ಹೊಸ ಕಾನೂನು ಮಾಡುವುದು ಬೇರೆ.

ಶ್ರೀ ಕಿಮ್ಮನೆ ರತ್ನಾಕರ: ಮಾನ್ಯ ವಿರೋಧ ಪಕ್ಷದ ನಾಯಕರೆ, ಒಂದು ನಿಮಿಷ ಹೇಳುತ್ತೇನೆ. ಈಗಿರತಕ್ಕಂಥ ವ್ಯವಸ್ಥೆಯಲ್ಲಿ ನಾವು ಇರತಕ್ಕಂಥ ಬಾಕಿ ಮೊತ್ತವನ್ನು recovery ಮಾಡತಕ್ಕಂಥದ್ದಕ್ಕೆ BBMP ಯಿಂದ 200 ಕೋಟಿ ರೂಪಾಯಿ ಬರಬೇಕು ಹಾಗೂ ಸ್ಥಳೀಯ ಸಂಸ್ಥೆಗಳಿಂದ 48 ಕೋಟಿ ರೂಪಾಯಿಗಳು ಬರಬೇಕು. BBMP ಯಿಂದ ಹಾಗೆ ನಾವು recovery ಮಾಡುವುದೆಂದರೆ, ಬೇರೆ ಏನು ಕಾರಣ ಬರುವುದಿಲ್ಲ. Coercive method ಎಂದರೆ we have to go for attaching the movables and salaries of the concerned authorities or like that. We cannot do that unless we have a legislation. Legislation ಮಾಡಬೇಕಾಗುತ್ತದೆ. I am trying to do that ಈಗ ಅದೊಂದು draft ನ್ನು ready ಮಾಡಿದ್ದೇವೆ. ಎಲ್ಲಿ ಹಣ ಬರುವುದಿಲ್ಲ. we have to make an attachmen. There is no other course ಪ್ರಯತ್ನ ಮಾಡಬಹುದು, repeat ಮಾಡಬಹುದು, request ಮಾಡಬಹುದು, ಇಷ್ಟನ್ನು ಬಿಟ್ಟರೆ ಕಾಯ್ದೆಯೊಳಗೆ ಬೇರೆ ಯಾವುದೇ ಅವಕಾಶಗಳಿಲ್ಲ. ಕಾಯ್ದೆಗಳನ್ನು ನಾವು ಮಾಡಿಕೊಂಡು ಏನಾದರೂ ಮಾಡಬೇಕಷ್ಟೆ.

ಉಪಾಧ್ಯಕ್ಷರು: O.K. ಮುಂದಿನ ಪ್ರಶ್ನೆ ರವಿ ಸುಬ್ರಹ್ಮಣ್ಯರವರು ಕೇಳಿ.

30(283); ಶ್ರೀ ರವಿಸುಬ್ರಹ್ಮಣ್ಯ ಎಲ್.ಎ. (ಬಸವನಗುಡಿ)

ಅ) ರಾಜ್ಯದಲ್ಲಿ ಖಾಲಿ ಇರುವ ಪ್ರೌಢಶಾಲಾ ಶಿಕ್ಷಕರ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು)

ಆ) ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ;

ಇ) ಹೊಸ ನೇಮಕಾತಿಯ ಮೊದಲು ಟಿ.ಇ.ಟಿ. ಪರೀಕ್ಷೆಯನ್ನು ಮತ್ತೊಮ್ಮೆ ನಡೆಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಈ) ಹಾಗಿದ್ದಲ್ಲಿ ಈ ಪರೀಕ್ಷೆಯನ್ನು ಯಾವಾಗ ನಡೆಸಲಾಗುವುದು?